ದಿನಾಂಕ 18.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ. ಟಿ ಎನ್ ಎಸ್ ವಕೀಲರಿಂದಃ**

ಅರ್ಜಿದಾರರ ತಾಯಿಗೆ ಅಂದಾಜು 80 ವರ್ಷ ವಯಸ್ಸಾಗಿತ್ತು. ಚಿಂತಾಮಣಿಗೆ ಬಂದ ನಂತರ ಅರ್ಜಿದಾರರ ತಾಯಿ ನಮ್ಮ ಜೊತೆ ಇದ್ದರು. ಅವರಿಗೆ ಶುಗರ್ ಮತ್ತು ಬಿಪಿ ಇದೇ ಎಂದರೆ ಸಾಕ್ಷಿಯು ಮೊದಲು ಇರಲಿಲ್ಲ, 5 ವರ್ಷಗಳಿಂದ ಶುರುವಾಗಿದೆ. ಆಕೆಯನ್ನು ಮೊದಲಿನಿಂದಲೂ ಮನೆಯಲ್ಲಿ ಇರಿಸಿಕೊಳ್ಳುವುದು ಬೇಡ ಎಂದು ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆಕೆಗೆ ಗಂಡ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಮಾವನವರ ಕೆಲಸವನ್ನೇ ನನ್ನ ಗಂಡನಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಅವರು ಮನೆಯಲ್ಲಿದ್ದಾಗ ಅವರಿಗೆ ಊಟ ಕೊಡದೆ, ಕಿರಿಕಿರಿ ಮಾಡಿ, ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದೆ ಎಂದರೆ ಸರಿಯಲ್ಲ ಅವರಿಗೆ ಎಲ್ಲ ಸೊಸೆಯಂದಿರಗಿಂತ ನನ್ನ ಮೇಲೆ ಪ್ರಿತಿ ಇದ್ದು, ಬಟ್ಟೆ ಒಗೆಯುವುದು, ತಲೆ ಬಾಚುವುದು ಮಾಡುತ್ತಿದ್ದೆ. ನಮ್ಮ ಅತ್ತೆಯ ಮೇಲೆ ದೂರನ್ನು ಕೊಟ್ಟಿದ್ದೇನೆ ಎಂದರೆ ಅವರು ವರದಕ್ಷಿಣೆಯನ್ನು ತೆಗೆದುಕೊಂಡು ಬಾ ಎಂದು ಹೊರಗೆ ಹಾಕಿದಾಗ ದೂರನ್ನು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

ನಾನು ಮದುವೆ ಆದಾಗಿನಿಂದಲೂ ವರದಕ್ಷಿಣೆ ಕೇಳುತ್ತಿದ್ದರು ದಿಃ 14.02.2022 ರಂದು 10 ಲಕ್ಷ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ದೌರ್ಜನ್ಯ ಮಾಡಿರುತ್ತಾರೆ. ಆ ರೀತಿ ದೌರ್ಜನ್ಯ ಮಾಡಿದ್ದನ್ನು ನೋಡಿರುವವರು ಯಾರಾದಾರು ಇದ್ದಾರಾ ಎಂದರೆ ನಮ್ಮ ಯಜಮಾನರು, ಮೈದುನ ಆನಂದ, ಚಿಕ್ಕಮನ ಮಗ ನಾಗೇಶ್ ಇದ್ದರು. ಅವರ ಕಡೆಯ ರೌಡಿಗಳು ಇದ್ದರು ಎಂದು ನುಡಿಯುತ್ತಾರೆ. ಬೇರೆ ಜನರು ಆ ರೀತಿ ದೌರ್ಜನ್ಯ ಮಾಡಿದ್ದನ್ನು ನೋಡಿದವರು ಇದ್ದಾರೆ ಅವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬರಲು ತೊಂದರೆ ಏನು ಇಲ್ಲ. ಅರ್ಜಿದಾರರು ಎಂದಿಗೂ ವರದಕ್ಷಿಣೆ ಕೇಳಿಲ್ಲ, ನಾನೇ ಅರ್ಜಿದಾರರು ಮತ್ತು ಮಕ್ಕಳನ್ನು ಹೊಡಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಸ್ಟೇಟ್ ಡಿಎಸ್ ಎಸ್ ಲೀಡರ್ ಎಂದರೆ ಸಾಕ್ಷಿಯು ಸೋಶಿಯಲ್ ವರ್ಕರ ಸ್ಟೇಟ್ ಲೀಡರ್ ಇದ್ದಾರೆ ಎಂದು ನುಡಿಯುತ್ತಾರೆ.

ನನ್ನ ಮಗ ಕೊಟ್ಟಿರುವ ಕೇಸಿನಲ್ಲಿ ಯಾರೆಲ್ಲಾ ಆರೋಪಿಗಳಾಗಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆ ತಾಯಿ, ನನ್ನ ತಮ್ಮ ಮತ್ತು ನಾನು ಎಂದು ನುಡಿದು ಮುಂದುವರೆದು ನನ್ನ ಮಗನನ್ನು ಹೆದರಿಸಿ ನಮ್ಮ ಮೇಲೆ ದೂರು ಕೊಡಿಸಿದ್ದಾರೆ. ಅದರಲ್ಲಿರುವ ಬರವಣಿಗೆ ಅವರದಲ್ಲ. ನನ್ನ ಮಗ

ಎಲ್ ಎಲ್ ಬಿ ಮಾಡುತ್ತಿದ್ದಾನೆ ಎಂದರೆ ಸರಿ. ನನ್ನ ಮಗ ಯಾವ ಕಾಲೇಜಿನಲ್ಲಿ ಎಲ್ ಎಲ್ ಬಿ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ಆತ ಇನ್ನೂ ಸೇರಿಕೊಂಡಿಲ್ಲ ಆತ ಬಿಬಿ ಎಂ ಮಾಡಿದ್ದು, ಆತ ಎಂ ಬಿಎ ಮಾಡಬೆಕೆಂದಿದ್ದು ಅವರ ತಂದೆ ಆತನನ್ನು ಎಲ್ ಎಲ್ ಬಿ ಮಾಡಬೇಕೆಂದು ಹಾಕಿದ್ದಾರೆ. ಬಿಜಿಎಸ್ ಕಾಲೇಜಿನಲ್ಲಿ 2 ನೇ ವರ್ಷದ ಎಲ್ ಎಲ್ ಬಿ ಕಾಲೇಜಿನಲ್ಲಿ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ಆತನ ತಂದೆಯ ಒತ್ತಡದಿಂದ ಮಾಡುತ್ತಿದ್ದಾನೆ ಎಂದು ನುಡಿಯುತ್ತಾರೆ. ಆತ ಎಸ್ ಎಸ್ ಎಲ್ ಸಿಯನ್ನು ಪಿಲ್ಯುಗುಂಟೆಯ ಗ್ಲೋಬಲ್ ಹೈಸ್ಕೂಲ್, ಪಿಯುಸಿಯನ್ನು ರಾಜೀವ ಕಾಲೇಜಿನಲ್ಲಿ ಮಾಡಿದ್ದಾನೆ. ನಾನು ಮಕ್ಕಳನ್ನು ಸರಿಯಾಗಿ ನೋಡಿಕೊಂಡಿಲ್ಲ ಮತ್ತು ಅರ್ಜಿದಾರರನ್ನು ಸರಿಯಾಗಿ ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ದಿಃ 06.08.2020 ರಲ್ಲಿ ಮನೆ ರಿಜಿಸ್ಟ್ರೇಶನ್ ನನ್ನ ಹೆಸರಿನಲ್ಲಿ ಇಲ್ಲ. ನನ್ನ ಹೆಸರಿನಲ್ಲಿ ಚಿಂತಾಮಣಿಯಲ್ಲಿ ಮೇಲೆ ದಿನಾಂಕದಂದು ಯಾವುದೇ ರಿಜಿಸ್ಟ್ರೇಶನ್ ಆಗಿಲ್ಲ. ಸಬ್ ರಿಜಿಸ್ಟ್ರರ್ ಕಚೇರಿಗೆ ನಾನು ರಿಜಿಸ್ಟ್ರೇಶನ್ ಗಾಗಿ ಹೋಗಿಲ್ಲ. ನಿರ್ಮಲಾ ಬಿ ವೆಂಕಟ್ ಸ್ವಾಮಿ ಎಂದರೇ ನಾನೇ. ಸಾಕ್ಷಿಗೆ ದಿಃ 06.08.2020 ರ ರಿಜಿಸ್ಟರ್ ಕ್ರಯ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ನನ್ನನ್ನು ಮನೆಯಿಂದ ಹೋರಗೆ ಹಾಕಿದ್ದಾಗ ನನ್ನ ತಂದೆ ತಾಯಿ ಅರಿಶಿಣ ಕುಂಕುಮಕ್ಕಾಗಿ ನನ್ನ ಮತ್ತು ನನ್ನ ತಾಯಿ ಜಂಟಿ ಆಸ್ತಿಯಾಗಿ ಕೊಟ್ಟಿದ್ದಾರೆ ನನಗೆ ಸಂಪೂರ್ಣವಾಗಿ ಕೊಟ್ಟಿಲ್ಲ. ನನ್ನನ್ನು ಹೊರಗೆ ಹಾಕಿದ ನಂತರ ಎಷ್ಟು ವರ್ಷಗಳ ನಂತರ ಕ್ರಯ ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಇನ್ನೂ ನೋವಿನಲ್ಲಿದ್ದು ಅಂದಾಜು ದಿನವನ್ನು ಹೇಳಲು ಆಗುವುದಿಲ್ಲ. ಸದರಿ ಮನೆಯಲ್ಲಿ ಈಗ ನಾನು ವಾಸವಿದ್ದೇನೆ. ಮನೆ ಕೊಂಡುಕೊಂಡ ದಿನದಿಂದ ಅಲ್ಲಿಯೇ ವಾಸವಿದ್ದೇನೆ. ನನ್ನ ತಂದೆ ತಾಯಿ ನನ್ನ ಜೊತೆ ವಾಸವಿದ್ದಾರೆ. 2016 ನೇ ಇಸವಿಯಿಂದ ನಾನು ಮನೆ ಬಿಟ್ಟು ಬಂದಿದ್ದೇನೆ ಎಂದರೆ ಸರಿಯಲ್ಲ. ಆಗಿನಿಂದಲೂ ನನ್ನ ಗಂಡ ಮತ್ತು ಮಕ್ಕಳ ನೋಡಿಲ್ಲ ಮತ್ತು ಯೋಗಕ್ಷೇಮ ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ಡಿವಿಸಿ 5/2020 ರಲ್ಲಿ 70 ಲಕ್ಷ ಪರಿಹಾರ ಕೇಳಿದ್ದೇನೆ ಎಂದರೆ ಸರಿ. ಈ ಕೇಸಲ್ಲೂ 50 ಲಕ್ಷ ಪರಿಹಾರ ಕೇಳಿದ್ದೇನೆ ಎಂದರೆ ಸರಿ. ನಾನು ಮನೆಯಲ್ಲಿ ಇರಲು ಅವಕಾಶ ಕೊಡಿ ಎಂದು ಸಹ ಕೇಳಿದ್ದೇನೆ ಎಂದರೆ ಸರಿ.

ಜಾಲಪ್ಪ ಆಸ್ಪತ್ರೆಯಲ್ಲಿ ಅರ್ಜಿದಾರರ ಎದೆಗೆ ಹೊಡೆದಿದ್ದ ಕಾರಣ ನಾಲ್ಕು ತಿಂಗಳು ರಕ್ತ ಹೆಪ್ಪು ಗಟ್ಟಿ ಆಸ್ಪತ್ರೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಅದರ ಹೆಪ್ಪುಗಟ್ಟಿರುವುದರಿಂದ ರಕ್ತ ತೆಗೆಯಲು 2 ವಬಾರಿ ಆಪರೇಷನ್ ಆಗಿದೆ ಎಂದರೆ ಸಾಕ್ಷಿಯು ಅವರಿಗೆ ಕ್ಯಾನ್ಸರ್ ಆಗಿತ್ತು. ಕೆ ಎಚ್ ಮುನಿಯಪ್ಪ ರೆವಿನ್ಯೂ ಮಿನಿಸ್ಟರ್ ಸದರಿ ವಿಚಾರವನ್ನು ತಿಳಿಸಿದ್ದರು. ನಾನು ಅವರನ್ನು ನೋಡಲು ಆಸ್ಪತ್ರೆಗೆ ಹೋಗಿದ್ದೆ ದಿನಾಂಕ ನೆನಪಿಲ್ಲ. ತಿಂಗಳು, ತಾರೀಖು ನೆನಪಿಲ್ಲ. ಜಾಲಪ್ಪ ಆಸ್ಪತ್ರೆಯಲ್ಲಿ ಅವರು

ಇದ್ದರು. 1 ತಿಂಗಳು ಅವರು ಆಸ್ಪತ್ರೆಯಲ್ಲಿದ್ದು ಹಿಮೋಥೆರಪಿ ಮಾಡಲಾಗಿತ್ತು. ನಾಲ್ಕು ತಿಂಗಳು ನಾನು ದಿನಾ ನೋಡಲು ಹೋಗುತ್ತಿದ್ದೆ. ನಾನು ರಜಾ ಹಾಕಿರಲಿಲ್ಲ. ನಾನು ಸಂಜೆ ಕಚೇರಿ ನಂತರ ಬೆಳಿಗ್ಗಿನ ಜಾವ ಹೋಗುತ್ತಿದ್ದೆ. ನಾನು ಒಂದು ದಿನ ಅವರನ್ನು ನೋಡಲು ಹೋಗಿಲ್ಲ, ಅವರ ಕಾಯಿಲೆಯನ್ನು ವಿಚಾರಿಸಿಲ್ಲ ಎಂದರೆ ಸರಿಯಲ್ಲ. ನಾನು ದೂರನ್ನು ಕೊಟ್ಟಿದ್ದರಿಂದ ಅವರ ಅರ್ಜಿದಾರರಿಗೆ ಡಿಇ ಆಗಿತ್ತು ಎಂದರೆ ಸಾಕ್ಷಿಯು ಆ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಆ ಬಗ್ಗೆ ವಿಚಾರಿಸಿಲ್ಲ ಎಂದು ನುಡಿಯುತ್ತಾರೆ. ನಾನು ಮಂಜುನಾಥ ಅವರನ್ನು ಮದುವೆಯಾದಾಗಿನಿಂದಲೂ ಮಾನಸಿಕವಾಗಿ ಹಾಗೂ ದೈಹಿಕವಾಗಿ ತೊಂದರೆಯನ್ನು ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಎಲ್ಲಾ ಒಡವೆಗಳನ್ನು ಎತ್ತು ಕೊಂಡು ಹೋಗಿದ್ದೇನೆ ಎಂದರೆ ಸರಿಯಲ್ಲ. 2016 ಸಾಲಿನಿಂದಲೇ ಎಲ್ಲಾ ವಸ್ತುಗಳು ಅಲ್ಲಿಯೇ ಇರಲಿಲ್ಲ ಎಂದರೆ ಸರಿಯಲ್ಲ.  ತೊಂದರೆ ಕೊಡುವ ಉದ್ದೇಶದಿಂದ ರಾಜಕೀಯ ಪ್ರಭಾವ ಬಳಸಿಕೊಂಡು ಅರ್ಜಿದಾರರ ಕುಟುಂಬಕ್ಕೆ ತೊಂದರೆ ಕೊಡುವ ಸಲುವಾಗಿ ಒಂದು ಕ್ರಿಮಿನಲ್ ಕೇಸ್, ಡಿವಿ ಕೇಸ ಹಾಕಿದ್ದೀರಾ ಎಂದರೆ ಸರಿಯಲ್ಲ. ನಾನು ಮಾನಸಿಕವಾಗಿ ಅವರಿಗೆ ಸದಾ ತೊಂದರೆ ಕೊಡುತ್ತಲೇ ಇರುತ್ತೇನೆ ಎಂದರೆ ಸರಿಯಲ್ಲ. ನನ್ನ ಗ್ರಾಸ್ ಸ್ಯಾಲರಿ 1 ಲಕ್ಷ ಇದೆ ಎಂದರೆ ಸರಿ. ಎಲ್ಲಾ ಡಿಡಕ್ಷನ ಆಗಿ 50 ಸಾವಿರ ಬರುತ್ತಿದೆ. ಎಲ್ಲಾ ಡಿಡಕ್ಷನ ಆಗಿ 80 ಸಾವಿರ ಬರುತ್ತಿದೆ ಎಂದರೆ ಸರಿಯಲ್ಲ. ಅರ್ಜಿದಾರರು ಅವರ ಪೂರ್ತಿ ಸಂಬಳವನ್ನು ಮಕ್ಕಳಿಗೆ ಮತ್ತು ತಾಯಿಗೆ ಬಳಸುತ್ತಿದ್ದಾರೆ ಎಂದರೆ ಸಾಕ್ಷಿಯು ಈಗ ಮಾತ್ರ ನನ್ನ ಸಂಬಳ ನನಗೆ ಉಳಿಯುತ್ತದೆ ಎಂದು ನುಡಿಯುತ್ತಾರೆ.

ಅರ್ಜಿದಾರರಿಗೆ ಅನೈತಿಕ ಸಂಬಂಧ ಇಲ್ಲದೇ ಇದ್ದರೂ ಅವರಿಗೆ ನಾನು ಸದಾ ಅನೈತಿಕ ಸಂಬಂಧ ಇಟ್ಟು ಕೊಂಡಿದ್ದೀರಾ ಎಂದು ಹೇಳಿ ಹೇಳಿ ಕಿರುಕುಳ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಕುಡಿತ, ಸಿಗರೇಟ್ ಸೇವನೆ, ಪಾನ್ಪರಾಕ್ಸ ದುರಭ್ಯಾಸ ಇತ್ತು ಮದುವೆ ಆದ ಮೇಲೆ ನಾನೇ ನಿಯಂತ್ರಣದಲ್ಲಿಟ್ಟಿದ್ದೆ. ನನ್ನ ಮಗಳನ್ನು ಸಹ ಒಂದು ದಿನ ಸಾಕಿಲ್ಲ ಎಂದರೆ ಸರಿಯಲ್ಲ. ಆಕೆಯನ್ನು ನಮ್ಮ ಅತ್ತೆಯೇ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನೇ ಅರ್ಜಿದಾರಿಗೆ ಹಿಂಸೆ ಕೊಟ್ಟು ನಾನೇ ಬಿಟ್ಟು  ಹೋಗಿದ್ದೇನೆ ಎಂದರೆ ಸರಿಯಲ್ಲ. ಗಂಡನ ಮೇಲೆ ಮತ್ತು ಮಕ್ಕಳ ಮೇಲೆ ಪ್ರೀತಿ ಇಲ್ಲ ಅವರ ಯೋಗಕ್ಷೇಮ ನೋಡಿಕೊಂಡಿಲ್ಲ ಸಾಕ್ಷಿಯು ಅದಕ್ಕಾಗಿ ನನ್ನನ್ನು ಗಂಡನ ಮನೆಗೆ ಸೇರಿಕೊಳ್ಳಿ ಎಂದು ಕೇಳಿಕೊಳ್ಳುತ್ತಿದ್ದೇನೆ. ನನ್ನನ್ನು ಅರ್ಜಿದಾರೊಂದಿಗೆ ಸೇರಿಸಿದರೇ ನಾನು ಪುನಃ ಅವರಿಗೆ ಕಿರುಕುಳ ಕೊಡುತ್ತೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿದಾರರು ಪ್ರೀತಿ ಇದ್ದಲ್ಲಿ ಕ್ರಿಮಿನಲ್ ಕೇಸು ಮತ್ತು ಡಿವಿ ಕೇಸು ಹಾಗೂ ಅವರ ಮೇಲಾಧಿಕಾರಿಗೆ ದೂರನ್ನು ಕೊಡುತ್ತಿರಲಿಲ್ಲ ಎಂದರೆ

ಸರಿಯಲ್ಲ. ನನ್ನ ಮತ್ತು ಅರ್ಜಿದಾರರ ನಡುವೆ ವಿವಾಹ ಸಾಮರಸ್ಯ ಯಾವಾಗಲು ಹಾಳಾಗಿ ಹೋಗಿದ್ದರಿಂದ ಮತ್ತೆ ಅದನ್ನು ಪುನರಸ್ಥಾಪಿಸಲು ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ**
**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**